1	2	3
		Rs.
	BELLARY DISTRICT	
1	K. N. S. High School, Ittigi	... 1,000
2	S. G. High School, Ballary	... 1,000
3	Ladaf Hakim Shahni High School, Hampasagara	... 2,000
4	Panchayat Girls High School, Harapanhalli	... 1,500
5	G. P. T. D. B. H. S., Hadagalli	... 3,000

ಸರ್ಕಾರ ನಿರ್ಮಿಸಿರುವ ಬಾಡಿಗೆ ಮನೆಗಳು

128. ಶ್ರೀ ಜಯಪ್ರಕಾಶ ನಾರಾಯಣ್ (ಸಿರ್ಸಿ).—

ಸಾರಿಗೆಯ ಮಂತ್ರಿಗಳು ದಯವಿಟ್ಟು ಕೆಳಕಂಡ ವಿಷಯಗಳನ್ನು ತಿಳಿಸುವರೇ :—

(ಅ) ಬಾಡಿಗೆ ಆಧಾರದ ಯೋಜನೆಯ ಮನೆಗಳನ್ನು ಯಾವ ಆಧಾರದ ಮೇಲೆ ಹಂಚಲಾಗಿದೆ ;

(ಆ) ಸದರಿ ಮನೆಗಳಿಗೆ ಬಾಡಿಗೆ ದರಗಳನ್ನು ಅವರ ಸಂಬಳದ ಯಾವ ಶೇಕಡಾವಾರು ದರದಲ್ಲಿ ಗೊತ್ತುಪಡಿಸಲಾಗಿದೆ ;

(ಇ) ಪ್ರತಿ ತಿಂಗಳು ಬಾಡಿಗೆ ಹಣವನ್ನು ವಸೂಲು ಮಾಡಲಾಗುತ್ತಿದೆಯೇ ;

(ಈ) ಸರ್ಕಾರಿ ನೌಕರರಿಗೆ ಈಗ ಕೊಡುತ್ತಿರುವ ಬಾಡಿಗೆ ಭತ್ಯ ಮತ್ತು ಸದರಿ ಮನೆಗಳಿಗೆ ಸರ್ಕಾರದವರು ವಸೂಲು ಮಾಡುತ್ತಿರುವ ಬಾಡಿಗೆ ಹಣ ಒಂದೇ ಪ್ರಮಾಣದಲ್ಲಿದೆಯೇ ;

(ಉ) ಹಾಗಿಲ್ಲದಿದ್ದಲ್ಲಿ ಮನೆಬಾಡಿಗೆ ಭತ್ಯವನ್ನು ಹೆಚ್ಚಿಸುವ ಮೂಲಕವಾಗಲೀ ಇಲ್ಲವೇ ವಸೂಲು ಮಾಡುತ್ತಿರುವ ಬಾಡಿಗೆ ದರಗಳನ್ನು ಕಡಿಮೆಗೊಳಿಸುವ ಮೂಲಕವಾಗಲೀ ಸಮಗೊಳಿಸಲು ಸರ್ಕಾರದವರಿಗಿರುವ ತೊಂದರೆಗಳೇನು ?

ಶ್ರೀ ಎಮ್. ಮಹಮ್ಮದ್ ಆಲಿ (ಸಾರಿಗೆ ಮಂತ್ರಿಗಳು).—

(ಅ) ಮನೆ ಕೊಡುಗೆಯ ನಿಯಮಾವಳಿಗನುಸಾರವಾಗಿ.

(ಆ) ಶೇಕಡಾ 12½%.

(ಇ) ಕ್ರಮ ತೆಗೆದುಕೊಳ್ಳಲಾಗಿದೆ.

(ಈ) ಇಲ್ಲ.

(ಉ) ನಿರ್ದಿಷ್ಟಮಾಡಿದ ಬಾಡಿಗೆಯೂ ಮತ್ತು ಮನೆಬಾಡಿಗೆ ಭತ್ಯ ಸಮರ್ಪಕವೆಂದು ಪರಿಗಣಿಸಲಾಗಿದೆ.